ಕತ್ತಿ ಅವನ ಕೆನ್ನೆಯ ಮೇಲಿಂದ ಕೆಳಗಿಳಿಯತೊಡಗಿತು. ಮೊದಲ ಸುತ್ತಿನಲ್ಲಿ ಉಳಿದಿದ್ದ ಒರಟು ನೀಲಿಗಪ್ಪು ಗಡ್ಡದ ಗುತ್ತಿಗಳು. ನಾನು ಮತ್ತೊಂದು ಮಗ್ಗಲಿಗೆ ತಿರುಗಿದೆ. ಅವನು, ಈ ಕವಿಗಳು ಮತ್ತು ಆ ಪಾದ್ರಿಗಳ ಹಾಗೆ ಗಡ್ಡ ಬಿಟ್ಟದ್ದರೆ ಚೆನ್ನಾಗಿರುತಿತ್ತೇನೋ ಎಂದುಕೊಂಡೆ. ಅದು ಅವನಿಗೆ ಸರಿಯಾಗಿರುತ್ತಿತ್ತು. ಬಹಳಷ್ಟು ಜನ ಅವನ ಗುರುತು ಹಿಡಿಯುತ್ತಿರಲಿಲ್ಲವೆನ್ನುವುದು ನಿಜವೇ ಆಗಿದ್ದರೂ ಕೂಡ ಅವನ ಪಾಲಿಗೆ ಅದು ಒಳ್ಳೆಯದೇ ಆಗಿರುತ್ತಿತ್ತೇನೋ! ಅವನ ಕತ್ತಿನ ಮೇಲೆ ನನ್ನ ಕ್ಷೌರದ ಕತ್ತಿ ಇಳಿಯುತ್ತಿರುವಾಗ ಈ ವಿಚಾರ ನನ್ನ ಮನಸ್ಸಿಗೆ ಬಂತು. ಈ ಹಂತದಲ್ಲಿ ನಾನು ತುಂಬಾ ಜಾಗರೂಕನಾಗಿರುವುದು ಅವಶ್ಯವಾಗಿತ್ತು. ಅವನ ಕುತ್ತಿಗೆಯ ಮೇಲೆ ಹೆಚ್ಚು ಕೂದಲಿರಲಿಲ್ಲವಾದರೂ ಅವು ಅಲ್ಲಲ್ಲೇ ಸುರುಳಿ ಸುತ್ತಿಕೊಂಡಿದ್ದವು. ಸ್ವಲ್ಪ ಹೆಚ್ಚು ಕಡಿಮೆಯಾದರೂ ಚರ್ಮದ ರಂಧ್ರಗಳಿಗೆ ಘಾಸಿಯಾಗಿ ರಕ್ತ ಕಾಣಿಸುವ ಸಂಭವವಿತ್ತು. ಇದು ನನ್ನ ವೃತ್ತಿ ಗೌರವಕ್ಕೆ ಅವಮಾನಕಾರಿಯಾಗಿರುತ್ತಿತ್ತು. ಅಲ್ಲದೆ, ಇವನು ನನ್ನ ವಿಶೇಷ ಗಿರಾಕಿಯಾಗಿದ್ದ. ನಮ್ಮ ಕಡೆಯ ಎಷ್ಟೊಂದು ಕ್ರಾಂತಿಕಾರಿಗಳನ್ನು ಇವನು ಹೊಸಕಿಹಾಕಿರಬಹುದು? ಜೀವಂತ ಶವಗಳನ್ನಾಗಿಸಿರಬಹುದು? ಇದರ ಬಗ್ಗೆ ಯೋಚಿಸದಿರುವುದೇ ಲೇಸು. ನಾನು ಅವನ ವೈರಿ ಎಂದು ಈ ಕ್ಯಾಪ್ಟನ್ ಟೊರೇಸನಿಗೆ ಗೊತ್ತಿಲ್ಲ. ಅವನಿಗೇನು, ಬೆರಳೆಣಿಕೆಯಷ್ಟು ನನ್ನ ಕ್ರಾಂತಿಕಾರಿ ಸ್ನೇಹಿತರಿಗೆ ಬಿಟ್ಟರೆ ಮತ್ತಾರಿಗೂ ಕೂಡ ಗೊತ್ತಿರಲಿಲ್ಲ. ನಮ್ಮ ಕಡೆಯವರನ್ನು ಬೆನ್ನಟ್ಟಿ ಹೋಗುತ್ತಿದ್ದ ಅವನ ಚಲನವಲನಗಳ ಮಾಹಿತಿಯನ್ನು ನಾನು ನನ್ನ ಕ್ರಾಂತಿಕಾರಿ ಸ್ನೇಹಿತರಿಗೆ ಮುಟ್ಟಿಸುತ್ತಿದ್ದೆ. ಇಷ್ಟೆಲ್ಲ ಇದ್ದು, ಅನಾಯಸವಾಗಿ ತನ್ನ ಕತ್ತನ್ನು ನನ್ನ ಕೈಗೊಪ್ಪಿಸಿದ್ದ ಕ್ಯಾಪ್ಟನ್ ಟೋರೇಸನಿಗೆ ನುಣುಪಾಗಿ ಮುಖಕ್ಷೌರವನ್ನು ಮಾಡಿ ಹಾಗೆಯೇ ಜೀವಂತವಾಗಿ ಹೊರಗೆ ಕಳಿಸಿದರೆ ನನ್ನನ್ನು ಏನೆಂದಾರು?

ಕ್ಯಾಪ್ಟನ್ ಟೋರೆಸನ ಕೆನ್ನೆಗಳು ಈಗ ಕೆಂಪಗೆ ಹೊಳೆಯುತ್ತಿದ್ದವು. ಅವನು ಒಳಗೆ ಬಂದಾಗಿನಿಗಿಂತಲೂ ಹೆಚ್ಚು ಸುಂದರನಾಗಿ, ಯುವಕನಾಗಿ ಕಾಣಿಸುತ್ತಿದ್ದ. ಇದು ಕ್ಷೌರಿಕನ ಅಂಗಡಿಗೆ ಬಂದು ಹೋಗುವ ಎಲ್ಲರ ಕತೆಯೂ ಹೌದೆಂದು ಹೇಳಬಹುದು. ನನ್ನ ಕೈ ಚಮತ್ಕಾರದಿಂದಾಗಿ ಕ್ಯಾಪ್ಟನ್ ಟೊರೇಸ್ ಮರು ಹುಟ್ಟು ಪಡೆದಿದ್ದ. ನಾನು ಜಂಭ ಕೊಚ್ಚುಕೊಳ್ಳುತ್ತಿದ್ದೇನೆಂದು ನಿಮಗೆ ಅನಿಸಿದರೂ, ಖಂಡಿತವಾಗಿಯೂ ನಾನು ಈ ನಗರದಲ್ಲಿ ಹೆಸರು ಪಡೆದಿರುವ ಕ್ಷೌರಿಕ. ಅವನ ಗಲ್ಲದ ಕೆಳಭಾಗದಲ್ಲಿ, ಪುಟಿಯುತ್ತಿರುವ ಆ ರಕ್ತನಾಳದ ಬಳಿ ಮತ್ತೂ ಕೊಂಚ ಸೋಪು, ಮತ್ತೊಂದು ಸುತ್ತು ಹೆರೆತ ಅಗತ್ಯವೆನಿಸಿತು. ವಿಪರೀತ ಸೆಕೆ. ನನ್ನಂತೆ ಕ್ಯಾಪ್ಟನ್ ಟೋರೆಸನೂ ಬೆವರುತ್ತಿರಬೇಕು. ಆದರೂ ಅವನ ಮುಖಭಾವದಲ್ಲಿ ಗುಲಗಂಜಿಯಷ್ಟೂ ಹೆದರಿಕೆ ಕಾಣಿಸುತ್ತಿರಲಿಲ್ಲ. ಅವನು ಎಷ್ಟೊಂದು ಆರಾಮಾಗಿದ್ದಾನೆಂದರೆ, ಸೆರೆ ಸಿಕ್ಕಿರುವ ಕ್ರಾಂತಿಕಾರಿಗಳನ್ನು ಸಂಜೆ ಏನು ಮಾಡುವುದೆಂದೂ ಅವನು ಇನ್ನೂ ಯೋಚಿಸಿರಲಿಲ್ಲ! ನಾನೋ, ಅವನ ಕೆನ್ನೆಗಳ ಚರ್ಮದಿಂದ ಒಂದು ಬಿಂದು ರಕ್ತವೂ ಹರಿಯಬಾರದೆಂದು ಕಾಳಜಿ ವಹಿಸಿ ಕ್ಷೌರದ ಕತ್ತಿಯನ್ನು ಬಳಸುತ್ತಿರುವ ಕ್ಷೌರಿಕ! ಯಾಕೋ ನನ್ನ ಆಲೋಚನಾ ಸರಣಿಗಳನ್ನು ಹತ್ತಿಕ್ಕಲಾಗುತ್ತಿಲ್ಲ. ಅವನು ಯಾವ ಗಳಿಗೆಯಲ್ಲಿ ನನ್ನ ಅಂಗಡಿಯನ್ನು ಹೊಕ್ಕನೋ! ನಾನೊಬ್ಬ ಕ್ರಾಂತಿಕಾರಿ ಏನೋ ಹೌದು, ಆದರೆ ಖಂಡಿತ ಕೊಲೆಗಾರನಂತೂ ಅಲ್ಲ! ಅವನನ್ನು ಕೊಲ್ಲುವುದು ಏನು ದೊಡ್ಡ ಕೆಲಸವಲ್ಲ. ಅಲ್ಲದೆ ಅದು ಖಂಡಿತವಾಗಿಯೂ ಪಾಪವಾಗಿರಲಿಕ್ಕಿಲ್ಲ. ಇದು ನಿಜವೇ? ಅವನನ್ನು ಕೊಂದು ನನಗೆ ಆಗಬೇಕಾಗಿರುವುದಾದರೂ ಏನು? ಏನೂ ಇಲ್ಲ! ಅವನನ್ನು ಕೊಂದರೆ ಮತ್ತೊಬ್ಬ ಅವನ ಜಾಗಕ್ಕೆ ಬರುತ್ತಾನೆ... ಮತ್ತೂ ಒಬ್ಬ... ಹೀಗೆ ಕೊಲೆಗಳ ಸರಣಿ, ರಕ್ತಪಾತ ಮುಂದುವರೆಯುತ್ತದೆ. 'ಕಸಕ್ಕ್...' ಅವನ ಕತ್ತನ್ನು ನಾನು ಲೀಲಾಜಾಲವಾಗಿ ಕತ್ತರಿಸಬಲ್ಲೆ. ಅವನಿಂದ ಒಂದು ಸಣ್ಣ ನರಳಿಕೆಯೂ ಕೂಡ ಹೊರಬರಲಾರದು. ಕಣ್ಣು ಮುಚ್ಚಿಕೊಂಡಿರುವ ಅವನಿಗೆ ನನ್ನ ಕ್ಷೌರಕತ್ತಿಯ